ಶ್ರೀ ಎಚ್. ಎಂ. ಚೆನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು). ಈ ವಿಷಯ ಸರ್ಕಾರದ ಗಮನಕ್ಕೆ ಬಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳನ್ನು ಅಲ್ಲಿಗೆ ಕಳಿಸಿದ್ದೇವೆ. ಅವರ ಬಗ್ಗೆ ಅವಶ್ಯಕವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಯಾವ್ಯಾವ ಸಹಾಯ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆನ್ನುವುದನ್ನು ನೋಡಿ ತಕ್ಕ ವ್ಯವಸ್ಥೆ ಮಾಡುವುದು, ಮತ್ತು ಯಾವ ಪ್ರಮಾಣದಲ್ಲಿ ಈ ಪ್ರಮಾದವಾಗಿದೆ ಎನ್ನುವ ಬಗ್ಗೆ ಖಚಿತವಾದ ವರದಿಯನ್ನು ಕಳಿಸಬೇಕೆಂದು ಹೇಳಿದ್ದೇವೆ. ವರದಿ ಬಂದ ಕೂಡಲೇ ಅಂದರೆ ಸೋಮವಾರ ವಿವರವಾದ ವರದಿಯನ್ನು ಸಭೆಯ ಮುಂದೆ ಇಡುತ್ತೇನೆ.

ಶ್ರೀ ಎಚ್. ಡಿ ದೇವೇಗೌಡ. ತಾವು ಸೋಮವಾರ ಏನು ವರದಿಯನ್ನು ಇಡುತ್ತೇನೆಂದು ಹೇಳಿದ್ದೀರಿ. ಅದರ ಜೊತೆಗೆ ಇದು ಯಾವ ಕಾರಣದಿಂದ ಆಯಿತು ಎಂಬುದರ ಬಗ್ಗೆ ಪೂರ್ಣವಾದ ವಿವರವನ್ನು ಕೊಡಬೇಕೆಂದು ಹೇಳುತ್ತೇನೆ. ಏಕೆಂದರೆ ಈ ಪ್ರಾಜೆಕ್ಟ್ ಆಗಿರುವುದು ೬೪-೬೫ನೇ ಇಸವಿಯಲ್ಲಿ. ಈಗ ನಿಮ್ಮ ಕೃಪೆಗೆ ಪಾತ್ರರಾದಂತಹ ಸೂಪರ್ ಚೀಫ್ ಇಂಜನೀಯರ್ ಎನಿದ್ದಾರೆ, ಅವರ ಮೇಲ್ವಿಚಾರಣೆಯಲ್ಲಿ ಈ ಪ್ರಾಜೆಕ್ಟ್ ಆಗಿದೆ, ಆಮೇಲೆ ತಪ್ಪಿತಸ್ಥರ ಮೇಲೆ ಏನು ಕ್ರಮ ತೆಗೆದುಕೊಳ್ಳುವುದು ಎಂದು ಆಲೋಚನೆ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) – ಈ ವಿಚಾರ ಪತ್ರಿಕೆಗಳಲ್ಲಿಯೂ ಬಂದಿದೆ. ಇದು ಬಹಳ ಗಹನವಾದುದು ಡ್ಯಾಮ್‌ನಲ್ಲಿ ಒಂದು ಲೀಕೇಜ್ ಇತ್ತು, ಕ್ರಾಕ್ ಇತ್ತು ಎಂದು ಸಹ ಪತ್ರಿಕೆಯಲ್ಲಿ ಬಂದಿದೆ. ಅದು ಯಾವುದು; ಇದಕ್ಕೆ ಯಾರು ಹೊಣೆಗಾರರು; ಮತ್ತು ಇದಕ್ಕೆ ರಿಪೇರಿ ಯಾರು ಮಾಡಿದರು ಎಂಬುದರ ಬಗ್ಗೆ ಪೂರ್ತಿ ವಿವರವನ್ನು ಓದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಿವಮ್ಮ (ನಂಜನಗೂಡು) - ಈ ಪ್ರಾಜೆಕ್ಟ್ ೧೯೬೮ ರಲ್ಲಿ ಮುಗಿದಿದೆ. ಅಂದರೆ ೧೦ ವರ್ಷ ಕೂಡ ಇದರ ಫಲವನ್ನು ಜನರು ಪಡೆಯಲಿಲ್ಲ. ಇದಕ್ಕೆ ಸುಮಾರು ೮೦ ಲಕ್ಷ ರೂಪಾಯಿಗೆ ಮೇಲ್ಪಟ್ಟು ಸರ್ಕಾರ ಖರ್ಚು ಮಾಡಿದ್ದಾರೆ. ಮಾನ್ಯ ಮಿತ್ರರು ಹೇಳಿದ ಹಾಗೆ ಮಾನ್ಯ ಸಚಿವರು ಇವನ್ನು ಸರಿಪಡಿಸುವುದರ ಜೊತೆಗೆ ಪ್ರೊಜೆಕ್ಟ್ ಇಷ್ಟು ಬೇಗ ಒಡೆಯಲು ಕಾರಣವೇನು; ಇದನ್ನು ಯಾರು ಮಾಡಿದರು ಎಂಬುದನ್ನು ಹೇಳಬೇಕು. ಯಾವ ಅಧಿಕಾರಿಯೇ ಆಗಲಿ, ಇದಕ್ಕೆ ಯಾರು ಕಾರಣರು ಎಂದು ಕಂಡುಹಿಡಿಯುವುದಕ್ಕೆ ಒಂದು ಎನ್‌ಕ್ವಾಯರಿ ಮಾಡಬೇಕು. ಬಹುಷಃ ಅದು ಜುಡಿಶಿಯಲ್ ಎನ್‌ಕ್ವಾಯರಿಯಾದರೂ ಆಗಬಹುದು. ಆಮೇಲೆ ತಪ್ಪಿತಸ್ಥರು ಯಾರಿದ್ದಾರೆ, ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ – ಮಾನ್ಯದೇವೇಗೌಡರು, ಕೃಷ್ಣನ್‌ರವರು ಮತ್ತು ಶಿವಮ್ಮನವರು ಬಹಳ ಕಳಕಳಿಯಿಂದ ಹೇಳಿದ ಮಾತನ್ನು ಕೇಳಿದ್ದೇನೆ. ನನಗೂ ಕೂಡ ಎಲ್ಲಾ ವಿವರಗಳನ್ನು ಸಂಗ್ರಹಿಸಬೇಕೆಂದು ದೇಶದ ಹಿತದೃಷ್ಟಿಯಿಂದ ಕಾತುರವಾಗಿದೆ. ಆದರೆ ಸೋಮವಾರ ಎಲ್ಲಾ ಮಾಹಿತಿಗಳನ್ನು ಕೊಡಬೇಕೆಂದರೆ ಸ್ವಲ್ಪ ಕಷ್ಟ. ಏಕೆಂದರೆ ನಾಳೆ ಭಾನುವಾರ, ಇವತ್ತು ಅರ್ಧ ದಿನ ರಜ. ಇದರ ರಿಕಾರ್ಡುಗಳನ್ನು ನೋಡಿ ಯಾವ್ಯಾವ ರೀತಿ ನಡೆದಿದೆ ಎಂಬುದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಆದಕ್ಕೆ ಸ್ವಲ್ಪ ಮಟ್ಟಿಗೆ ಕಾಲಾವಕಾಶ ಬೇಕಾಗುತ್ತದೆ. ಇವತ್ತು ಮಧ್ಯಾಹ್ನ ನಾನೇ ಖುದ್ದಾಗಿ ಪರಿಶೀಲನೆ ಮಾಡಿ ನಾಳೆ ಸಂಜೆ ಬರಬೇಕೆಂದಿದ್ದೇನೆ. ಇದು ಏನು ಕಾರಣದಿಂದ ಆಗಿದೆ ಎಂಬುದನ್ನು ನೋಡಬೇಕಾದರೆ ಸ್ವಲ್ಪ ಕಾಲ ಬೇಕಾಗುತ್ತದೆ. ಆದ್ದರಿಂದ ನಾನು ಒಂದು ಮಾತು ಹೇಳಿಬಿಟ್ಟು ಅದು ನಡೆಯಲಾರದೆ ಹೋದರೆ ಸರಿಹೋಗುವುದಿಲ್ಲ, ಮತ್ತು ಅದಕ್ಕೆ ಇಚ್ಛೆಪಡುವುದಿಲ್ಲ. ಆದ್ದರಿಂದ ಸೋಮವಾರ ಅದರಿಂದ ಕಷ್ಟನಷ್ಟ ಏನಾಗಿದೆ ಮತ್ತು ಅವರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಬಹುದು. ಕಂತ್ರು ಒಡೆದುಹೋದ ಕಾರಣವನ್ನು ಎಲ್ಲಾ ಮಾಹಿತಿ ಸಂಗ್ರಹಿಸಿ ಹೇಳಲು ಸ್ವಲ್ಪ ಕಾಲಾವಕಾಶ ಬೇಕು. ಆದಷ್ಟು ಜಾಗ್ರತೆ ಒದಗಿಸುತ್ತೇನೆ.

## (Formation of the State Relief Council)

ಶ್ರೀ ವಾಟಾಳ್‌ನಾಗರಾಜ್ :—ನಿನ್ನೆ ಮಾನ್ಯ ಮಂತ್ರಿಗಳು ಮೈ ಸೂರ್ ಸ್ಟೇಟ್ ರಿಲೀಫ್ ಕೌನ್ಸಿಲ್ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಡುತ್ತೇನೆ ಎಂದು ಹೇಳಿದರು.

ಅಧ್ಯಕ್ಷರು :—ಇವತ್ತು ನಾನ್ ಆಫಿಷಿಯಲ್ ಡೇ.

ಶ್ರೀ ಕೆ. ಸಿದ್ದಯ್ಯ :—ಮಾನ್ಯ ಅಧ್ಯಕ್ಷಣಿಯವರೇ ನಿನ್ನೆ ಚಾಮರಾಜನಗರದ ಸಮೂಪದಲ್ಲಿ ಚಿಕ್ಕ ಹೊಳೆ ಪ್ರಾಜೆಕ್ಟ್ ಒಡೆದು ಭಾರಿ ಅನಾಹುತವಾಗಿದೆ. ಕೆಲವು ಗ್ರಾಮಸ್ಥರು ತುಂಬಾ ಕಷ್ಟನಷ್ಟಗಳಿಗೆ ಈಡಾಗಿದ್ದಾರೆ. ಅನೇಕರು ಊರನ್ನು ಬಿಟ್ಟು ಬೇರೆ ಕಡೆಗೆ ಓಡಿಹೋಗುತ್ತಿದ್ದಾರೆ. ಕುಂಭೇಶ್ವರ ಕಾಲೋನಿ, ಕುಡ್ಲೂರು, ಬೂದಿತಿಟ್ಟು, ಅಲೂರು ಮುಂತಾದ ಗ್ರಾಮಗಳು ತೊಂದರೆಗಳಿಗೆ ಒಳಗಾಗಿವೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ಅವರಿಗೆ ಸ್ವಲ್ಪ ಪರಿಹಾರ ಕೊಡಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು :—ಅಲ್ಲಿಗೆ ಮಾನ್ಯ ಮಂತ್ರಿಗಳು ಹೋಗುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ :—ರೂಲ್ ನಂ. ೨೯೭ ರ ಪ್ರಕಾರ ಈ ಸದನದಲ್ಲಿ ಮೊನ್ನೆ ಮೈಸೂರ್ ಸ್ಟೇಟ್ ರಿಲೀಫ್ ಕೌನ್ಸಿಲ್ ಬಗ್ಗೆ ಚರ್ಚೆ ಆಯಿತು. ಇದರ ಬಗ್ಗೆ ತಾವು ಮಾರ್ಗದರ್ಶನ ನೀಡಬೇಕು ಎಂದು ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :—ಈಗ ತಾವು ಹೇಳುವುದನ್ನು ನಾನು ಕೇಳಬೇಕು, ನಾನು ಹೇಳುವುದನ್ನು ತಾವು ಕೇಳಬೇಕು. ಈಗ ಇರುವುದು ಅಷ್ಟೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ :—ಮಾನ್ಯ ಅಧ್ಯಕ್ಷಣಿಯವರೇ ನಾನು ನಿನ್ನೆ ದಿವಸ ಈ ಸಭೆಗೆ ಆಶ್ವಾಸನೆ ಕೊಟ್ಟಂತೆ ಸ್ಟೇಟ್ ರಿಲೀಫ್ ಕೌನ್ಸಿಲ್ ಬಗ್ಗೆ ಎಲ್ಲಾ ವಿವರಗಳನ್ನು ಪಡೆದಂಥಾ ಈ ಸ್ಟೇಟಮೆಂಟ್ ಅನ್ನು ನಾನು ಈ ಸಭೆಯ ಮುಂದೆ ಇಡುತ್ತೇನೆ.

## STATEMENT BY THE MINISTER FOR PUBLIC WORKS & STATE ELECTRICITY RE: CONSTITUTION OF THE RELIEF COUNCIL.

SRI H. M. CHANNABASAPPA :—The Mysore State scarcity Relief Council was formed on 31st October, 1972. Its office is located at 14, Sankey Road, Bangalore-1. The Council is a private social relief organisation with Sri D. Devaraj Urs as President. The President, Chamber of Commerce and the Mayor of Bangalore are Vice-Presidents. Sri B. V. Purnendra is the Secretary. The Council consists of 34 members. It includes a number of social and service organisations like Lions Club, Rotary Club, K. W. J. Association, etc, and a number of leading non-officials. They have come together to form the State Council with a view to mobilise resources through voluntary organisations and other donor agencies and channelise the same to the people in distress through concerned authorities. The objectives of the organization include opening of camps for workers in project areas having good employment potential, starting ganji kendras to serve the old and infirms, collect fodder and building materials from donor agencies and arrange for transport to drought affected areas, etc.

2. The Council has prepared a draft constitution to be considered at its next council meeting.

3. The Relief Council is purely a service organization and functions through its local units. Its main object is to create awareness of the seriousness of the situation in the drought areas